**ಪಾಠ–5** **ಏಪ್ರಿಲ್ 24–30**

# ವಾಗ್ದಾನದ ಮಕ್ಕಳು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 15:1–3, ಯೆಶಾಯ 25:8, 1 ಕೊರಿಂಥ 2:9, ಪ್ರಕಟನೆ 22:1–5, 1 ಪೇತ್ರ 2:9, ಆದಿಕಾಂಡ 11:4, ಆದಿಕಾಂಡ 12:2.

**ಸ್ಮರಣ ವಾಕ್ಯ : "ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು"** (ಮತ್ತಾಯ 28:20).

ಒಬ್ಬ ತಂದೆಯು ಮತ್ತು ಆತನ 10 ವರ್ಷದ ಮಗಳು ಸಮುದ್ರತೀರದಲ್ಲಿ ತಮ್ಮ ರಜೆಯ ಕಾಲವನ್ನು ಕಳೆಯುತ್ತಿದ್ದರು. ಒಂದುದಿನ ಅವರಿಬ್ಬರು ಸಮುದ್ರದಲ್ಲಿ ಈಜುವುದಕ್ಕೆ ಹೋದರು. ಅವರಿಬ್ಬರು ಒಳ್ಳೆಯ ಈಜುಗಾರರಾಗಿದ್ದರೂ ಸಮುದ್ರ ತೀರದ ಸ್ವಲ್ಪದೂರದಲ್ಲಿ ಬೇರ್ಪಟ್ಟುಕೊಂಡರು. ತಾವು ಅಲೆಯುಬ್ಬರ ದೆಸೆಯಿಂದ ಸಮುದ್ರದೊಳಕ್ಕೆ ಸೆಳೆಯಲ್ಪಡುತ್ತಿದ್ದೇವೆಂದು ತಂದೆಗೆ ಮನವರಿಕೆಯಾದಾಗ ತನ್ನ ಮಗಳನ್ನು ಕರೆದು ಮೇರಿ, ನಾನು ಸಹಾಯಕ್ಕಾಗಿ ಸಮುದ್ರತೀರದ ಕಡೆಗೆ ಹೋಗುತ್ತಿದ್ದೇನೆ, ನಿನಗೆ ಸುಸ್ತಾದರೆ ನೀನು ದಿನವೆಲ್ಲಾ ನೀರಿನಲ್ಲಿ ಅಂಗಾತ ತೇಲುತ್ತಾಯಿರು ನಾನು ನಿನಗೋಸ್ಕರ ಹಿಂದಿರುಗಿ ಬರುತ್ತೇನೆ ಎಂದು ಹೇಳಿದನು.

"ಸ್ವಲ್ಪ ಹೊತ್ತಿನಲ್ಲಿಯೇ ಅನೇಕ ಅನ್ವೇಷಣೆಕಾರರು (ಹುಡುಕುವವರು) ಮತ್ತು ದೋಣಿಗಳು ಆ ಸಣ್ಣ ಹುಡುಗಿಗೋಸ್ಕರ ನೀರಿನ ಮೇಲೆ ಹುಡುಕುತ್ತಾ

* ಈ ವಾರದ ಪಾಠವನ್ನು ಮೇ 1ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಸಾಗಹೊರಟರು ಸಮುದ್ರತೀರದಲ್ಲಿ ನೂರಾರು ಜನರು ಈ ಸುದ್ದಿಯನ್ನು ತಿಳಿದು ಕಾಂತರದಿಂದ ಕಾಯುತ್ತಾ ನಿಂತಿದ್ದರು. ಅವರು ಅವಳನ್ನು ತೀರದಿಂದ ದೂರದಲ್ಲಿ ಕಂಡುಕೊಂಡು ಕಾಪಾಡುವ ಹೊತ್ತಿಗೆ. ನಾಲ್ಕು ಗಂಟೆಗಳು ಕಳೆದು ಹೋಗಿದ್ದವು. ಆದರೆ ಆಕೆಯು ಶಾಂತವಾಗಿ ಯಾವುದೇ ಭಯವಿಲ್ಲದೆ ನೀರಿನಲ್ಲಿ ಅಂಗಾತವಾಗಿ ತೇಲುತ್ತಿದ್ದಳು. ಆಕೆಯನ್ನು ರಕ್ಷಿಸಿದವರು ದಡವನ್ನು ತಲುಪಿದಾಗ ಎಲ್ಲರೂ ಹರ್ಷೋದ್ಗಾರ ಕಣ್ಣೀರುಗಳಿಂದ ಕುಣಿದಾಡಿದರು. ಆದರೆ ಆ ಪುಟ್ಟ ಹುಡುಗಿ ಯಾವುದೇ ಆತಂಕವಿಲ್ಲದೆ ಶಾಂತವಾಗಿದ್ದಳು. ಜನರ ವರ್ತನೆಯು ಅವಳಿಗೆ ವಿಚಿತ್ರವಾಗಿ ತೋರಿತು. ಆಕೆಯು ನಮ್ಮ ತಂದೆಯು ತಿರುಗಿ ನನ್ನ ಬಳಿಗೆ ಬರುವವರೆಗೆ ನಾನು ದಿನವೆಲ್ಲ ಹಾಗೇ ತೇಲುತ್ತಿರಬಹುದು ಎಂದು ಹೇಳಿದ್ದರು, ಅವರು ಬರುತ್ತಾರೆಂಬುದು ನನಗೆ ತಿಳಿದಿತ್ತು. ಆದುದರಿಂದ ನಾನು ಈಜುತ್ತಾ ತೇಲಾಡುತ್ತಾ ಇದ್ದೆನು ಎಂದು ಹೇಳಿದಳು".

ಹೆಚ್.ಎಂ.ಎಸ್. ರಿಚರ್ಡ್ಸ್ "ಯೇಸುವು ತಿರುಗಿ ಬರುವಾಗ" ವಾಯ್ಸ್ ಆಫ್ ಪ್ರೊಫೆಸಿ ನ್ಯೂಸ್ ಮಾರ್ಚ್ 1949 ಪುಟ 5.

**ವಾರದ ಪಕ್ಷಿನೋಟ** : ದೇವರು ತನ್ನನ್ನು ತಾನು ಅಬ್ರಹಾಮನಿಗೆ ಗುರಾಣಿಯಾಗಿದ್ದೇನೆ ಎಂಬುದಾಗಿ ಏಕೆ ಕರೆದುಕೊಂಡನು? ಭೂಮಿಯ ಮೇಲೆ ಇರುವ ಎಲ್ಲಾ ಕುಲಗಳು ಅಬ್ರಹಾಮನ ಮೂಲಕ ಹೇಗೆ ಆಶೀರ್ವಾದವನ್ನು ಹೊಂದುವವು? ಆಡಂಬಡಿಕೆಯ ವಾಗ್ದಾನಗಳಲ್ಲಿ ಅತೀ ದೊಡ್ಡದಾವುದು?

**ಭಾನುವಾರ** **ಏಪ್ರಿಲ್ 25**

## ನಿನ್ನ ಗುರಾಣಿಯಾಗಿದ್ದೇನೆ

ಈ ಸಂಗತಿಗಳು ನಡೆದ ಮೇಲೆ ಅಬ್ರಹಾಮನಿಗೆ ದರ್ಶನದಲ್ಲಿ ಯೆಹೋವನ ವಾಕ್ಯ ಉಂಟಾಯಿತು: ಏನೆಂದರೆ ಅಬ್ರಹಾಮನೇ, ಭಯಪಡಬೇಡ, ನಾನು ನಿನಗೆ ಗುರಾಣಿಯಾಗಿದ್ದೇನೆ: ನಿನಗೋಸ್ಕರ ಅತ್ಯಧಿಕ ಬಹುಮಾನವು ಇಟ್ಟಿದೆ ಎಂಬುದೇ (ಆದಿಕಾಂಡ 15:1). ಆದಿಕಾಂಡ 15:1–3 ವಚನಗಳನ್ನು ಓದಿರಿ. ಈ ಸಂದೇಶವನ್ನು ಕೊಟ್ಟ ಸಂದರ್ಭದ ಬಗ್ಗೆ ಆಲೋಚಿಸಿರಿ. ದೇವರು ಪ್ರಥಮವಾಗಿ ಅಬ್ರಹಾಮನಿಗೆ ಭಯಪಡಬೇಡ ಎಂದು ಯಾಕೆ ಹೇಳಿದನು? ಅಬ್ರಹಾಮನು

ಯಾತಕ್ಕಾಗಿ ಭಯಪಡುವವನಾಗಿದ್ದನು? ದೇವರು ಅಬ್ರಹಾಮನಿಗೆ ನಾನು ನಿನಗೆ ಗುರಾಣಿಯಾಗಿದ್ದೇನೆ ಎಂದು ಹೇಳುವುದು ನಿರ್ದಿಷ್ಟವಾಗಿ ಆಸಕ್ತಿದಾಯಕವಾಗಿದೆ. ಇಲ್ಲಿ ನಾನು ಎಂಬುದು ಪುರುಷವಾಚಕ ಸರ್ವನಾಮಕವಾಗಿದೆ. ಇದು ವೈಯಕ್ತಿಕ ಸಂಬಂಧವನ್ನು ತೋರಿಸುತ್ತದೆ. ದೇವರು ತನ್ನನ್ನು ನನ್ನೊಬ್ಬರಿಗೂ ಸಂಬಂಧಪಡಿಸಿಕೊಳ್ಳುತ್ತಾನೆ. ಆತನು ಹಾಗೆಯೇ ನಮ್ಮೆಲ್ಲರಿಗೂ ಸಂಬಂಧಪಡುತ್ತಾನೆ.

"ಗುರಾಣಿ ಎಂಬ ಪದನಾಮವು ಸತ್ಯವೇದದಲ್ಲಿ ಬೊಟ್ಟಮೊದಲಿಗೆ ಕಾಣಿಸಿಕೊಳ್ಳುತ್ತದೆ. ಇಲ್ಲಿ ಮಾತ್ರ ದೇವರು ತನ್ನನ್ನು ತಾನು ಗುರಾಣಿಯೆಂದು ಕರೆದುಕೊಂಡಿದ್ದಾನೆ. ಇನ್ನಿತರ ವಚನಗಳಲ್ಲಿ ದೇವರ ಬಗ್ಗೆ ಮತ್ತೊಬ್ಬರು ವಿವರಿಸಿ ಹೇಳುವಾಗ ಇದು ಉಪಯೋಗವಾಗಿದೆ. ಧ.ಕಾಂಡ 33:29 ಕೀರ್ತನೆಗಳು 18:30 ಕೀರ್ತನೆ 84:11, ಕೀರ್ತನೆ 144:2.

ದೇವರು ತನ್ನನ್ನು ತಾನು ಮತ್ತೊಬ್ಬನಿಗೆ ಗುರಾಣಿಯಾಗಿದ್ದೇನೆಂದು ಕರೆದುಕೊಳ್ಳುವಾಗ ಇದರ ಅರ್ಥವೇನು? ಅಬ್ರಹಾಮನಿಗೆ ಮಾತ್ರ ಅನ್ಯಾಯವಾಗುವ ಮತ್ತು ನಮಗೆ ಅನ್ಯಾಯವಾಗದಿರುವ ಅರ್ಥವನ್ನು ಹೊಂದಿತ್ತೆ? ನಾವು ಕೂಡ ವಾಗ್ದಾನಗಳಿಗೆ ನಮ್ಮನ್ನು ಬಾಧ್ಯಸ್ತರನ್ನಾಗಿ ಮಾಡಿಕೊಳ್ಳಬಹುದೆ? ಹಾಗಾದರೆ ನಮಗೆ ಶಾರೀರಿಕವಾಗಿ ಯಾವುದೇ ಅಪಾಯವಿರುವುದಿಲ್ಲ ಎಂಬ ಅರ್ಥವನ್ನು ಕೊಡುತ್ತದೆಯೆ? ಯಾವ ರೀತಿಯಲ್ಲಿ ದೇವರು ನಮಗೆ ಗುರಾಣಿಯಾಗಿದ್ದಾನೆ? ಈ ಪ್ರತಿರೂಪವನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬಹುದು?

"ನಮ್ಮ ಮೇಲೆ ಯೇಸುಕ್ರಿಸ್ತನಿಗೆ ಇರುವುದು ಸಾಧಾರಣವಾದ ಆಸಕ್ತಿಯಿಲ್ಲ. ಆದರೆ ಆತನು ಆಸಕ್ತಿಯ (ಕಾಳಜಿಯ) ತಾಯಿಯು ತನ್ನ ಮಗುವಿನ ಮೇಲೆ ಇಡುವ ಕಾಳಜಿಗಿಂತ ಹೆಚ್ಚಿನದಂತಾಗಿದೆ.... ನಮ್ಮ ರಕ್ಷಕನು ನಮ್ಮನ್ನು ತಾನು ಪಟ್ಟ ದುಃಖ, ಬಾಧೆ, ಹಾಸ್ಯ, ನಿಂದೆ, ತಿರಸ್ಕಾರ ಮತ್ತು ಮರಣದಿಂದ ಕೊಂಡುಕೊಂಡಿದ್ದಾನೆ. ಭಯಭೀತನಾಗಿ ನಡುಗುತ್ತಿರುವ ದೇವರ ಮಗುವಾದ ನಿಮ್ಮನ್ನು ಕಣ್ಣಿಟ್ಟು ನೋಡುತ್ತಿದ್ದಾನೆ.

ಆತನು ನಿಮ್ಮನ್ನು ತನ್ನ ಸಂಘರ್ಷಣೆಯಿಂದ ಭದ್ರಪಡಿಸುತ್ತಾನೆ. ಆತನು ನಮಗಾಗಿ ದೇವರ ಮುಂದೆ ಮಧ್ಯಸ್ತಿಕೆ ವಹಿಸಲು ಮರಣ ಹೊಂದಿರುವುದರಿಂದ ನಾವು ದೇವರ ಸಾನ್ನಿಧ್ಯಕ್ಕೆ ಹೋಗದಂತೆ ನಮ್ಮ ದೌರ್ಭಾಗ್ಯಗಳು ನಮ್ಮನ್ನು ತಡೆಯಲಾರೆವು" ಎಲೆನ್ ಜಿ ವೈಟಮ್ಮನವರ "ದೇವರ ಕುಮಾರ ಕುಮಾರಿಯವನು" ಪುಸ್ತಕದಲ್ಲಿ 77ನೇ ಪುಟ.

ಎಲ್ಲಾ ಬಾಹ್ಯತೋರಿಕೆಯಿಂದ ರೋಲ್ಯಾಂಡು ಎಂಬಾತನು ದೇವರ ನಂಬಿಗಸ್ತ ಅನುಯಾಯಿಯಾಗಿದ್ದನು. ನಂತರ, ಇದ್ದಕ್ಕಿದ್ದ ಹಾಗೆಯೇ ಹತಾತ್ತನೆ ತೀರಿಕೊಳ್ಳುತ್ತಾನೆ. ಆತನ ಗುರಾಣಿಯಾದ ದೇವರಿಗೆ ಏನಾಯಿತು? ಗುರಾಣಿಯಾಗಿದ್ದೇನೆ ಎಂಬ ಆಲೋಚನೆಯನ್ನು ಭಿನ್ನವಾಗಿ ಪರಿಗಣಿಸಿಕೊಳ್ಳಬೇಕೆ? ವಿವರಿಸಿ. ಯಾವುದರಿಂದ ನಮ್ಮನ್ನು ಯಾವಾಗ ಗುರಾಣಿಯಂತೆ ಕಾಯುವವನಾಗಿದ್ದಾನೆ? (ನೋಡಿರಿ ಕೊರಿಂಥ 10:13).

**ಸೋಮವಾರ** **ಏಪ್ರಿಲ್ 26**

**"ನಿನ್ನ ಮೂಲಕವೂ ನಿನ್ನ ಸಂಕತಿಯಮಾಲಕವೂ ಭೂಮಿಯ ಎಲ್ಲಾ ಕುಲದವರಿಗೆ ಆಶೀರ್ವಾದ ಉಂಟಾಗುವುದು" – ಆ.ಕಾಂಡ 28:14.**

ನೀವು ಕ್ರಿಸ್ತನವರಾಗಿದ್ದಾರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನು- ಸಾರವಾಗಿ ಬಾಧ್ಯರೂ ಆಗಿದ್ದೀರಿ– ಗಲಾತ್ಯ 3:29.

ಒಂದಕ್ಕಿಂತ ಹೆಚ್ಚು ಸಲ ದೇವರು ಅಬ್ರಹಾಮನಿಗೆ ನಿನ್ನ ಮೂಲಕವೂ ನಿನ್ನ ಸಂತತಿಯ ಮೂಲಕವೂ ಭೂಮಿಯ ಎಲ್ಲಾ ಕುಲದವರಿಗೆ ಆಶೀರ್ವಾದ ಉಂಟಾಗುವುದು ಎಂದು ಹೇಳಿದ್ದಾನೆ (ನೋಡಿರಿ ಆ.ಕಾಂಡ 12:3, ಆ.ಕಾಂಡ 18:18; ಆ.ಕಾಂಡ 22:18). ಎಲ್ಲಾ ವಾಗ್ದಾನಗಳಿಗಿಂತ ಬಹಳ ಮುಖ್ಯವಾದ ದೀರ್ಘಾವಧಿಯ ಮತ್ತು ಎಲ್ಲರನ್ನು ಯೋಗ್ಯರನ್ನಾಗಿ ಮಾಡುವ ವಾಗ್ದಾನವು ಇದಾನಿಗಿರುವುದರಿಂದ ಅದ್ಭುತವಾದ ಈ ವಾಗ್ದಾನವು ಪುನರಾವರ್ತಿತವಾಗಿ ಬರುತ್ತದೆ.

ಒಂದು ಅರ್ಥದಲ್ಲಿ ಇದು ಯೆಹೂದ್ಯ ಜನಾಂಗವನ್ನು ಸ್ಥಾಪನೆ ಮಾಡುವ ವಾಗ್ದಾನವಾಗಿದ್ದು ಈ ಜನಾಂಗದ ಮೂಲಕ ದೇವರು ಭೂಲೋಕದ ಎಲ್ಲಾ

ಜನಾಂಗಕ್ಕೂ, ನಿಜವಾದ ದೇವರ ಬಗ್ಗೆ ಮತ್ತು ಆತನ ರಕ್ಷಣಾಯೋಜನೆಯ ಬಗ್ಗೆ ಬೋಧಿಸಬೇಕೆಂದು ಬಯಸಿದ್ದನು. ಆದಾಗ್ಯೂ ಇದು ಅಬ್ರಹಾಮನ ಸಂತತಿಯಲ್ಲಿ ಹುಟ್ಟಿಬಂದು ಭೂಲೋಕದ ಎಲ್ಲಾ ಕುಲದವರಿಗೋಸ್ಕರ ತಕ್ಕ ಬೆಲೆಯನ್ನು ಶಿಲುಬೆಯ ಮೇಲೆ ತೆತ್ತ ಯೇಸುಕ್ರಿಸ್ತನ ಮೂಲಕ ಈ ವಾಗ್ದಾನವು ಪೂರ್ಣಪ್ರಮಾಣದಲ್ಲಿ ನೆರವೇರಿತು. ಜಲಪ್ರಳಯದ ನಂತರ ತಿರುಗಿ ದೇವರು ಈ ಭೂಮಿಯನ್ನು ಪ್ರಳಯದಿಂದ ನಾಶಪಡಿಸುವುದಿಲ್ಲ ಎಂದು ಮಾಡಿದ ವಾಗ್ದಾನದ ಬಗ್ಗೆ ಆಲೋಚಿಸಿರಿ. ಯೇಸುಕ್ರಿಸ್ತನ ಮೂಲಕ ಸಿಗುವ ವಿಮೋಚನೆಯು ಸಿಗದೆ ಹೋಗಿದ್ದರೆ ನೋಹನೊಂದಿಗೆ ಮೂಡಿದ ವಾಗ್ದಾನವು ನಮಗೆ ಎಷ್ಟು ಪ್ರಯೋಜನಕಾರಿಯಾಗಿರುತ್ತಿತ್ತು?

ಅಬ್ರಹಾಮನಲ್ಲಿ ಯೇಸುಕ್ರಿಸ್ತನ ಮೂಲಕ ಭೂಲೋಕದ ಎಲ್ಲಾ ಜನಾಂಗಗಳು ಆಶೀರ್ವಾದ ಹೊಂದುವವು ಎಂಬುದನ್ನು ಹೇಗೆ ಅರ್ಥ ಮಾಡಿಕೊಳ್ಳುವೆವು? ಇದರ ಅರ್ಥವೇನು?

ಲೋಕದ ರಕ್ಷಕನ ವಾಗ್ದಾನವು ದೇವರ ಎಲ್ಲಾ ವಾಗ್ದಾನಗಳಿಗಿಂತ ದೊಡ್ಡದಾದ ಒಡಂಬಡಿಕೆ ವಾಗ್ದಾನವಾಗಿದೆ ಎಂಬುದರಲ್ಲಿ ಸಂಶಯವೇ ಇಲ್ಲ. ಒಡಂಬಡಿಕೆಯ ಏರ್ಪಾಟಿನ ಬಾಧ್ಯತೆಗಳು (ಕರ್ತವ್ಯಗಳು) ಮತ್ತು ಎಲ್ಲಾ ವಾಗ್ದಾನಗಳು ನೆರವೇರಲ್ಪಡುವುದಕ್ಕೆ ವಿಮೋಚಕನೇ ತನ್ಮೂಲಕ ಸಾಧ್ಯಮಾಡಿದನು. ಯೆಹೂದ್ಯನಾಗಲೀ ಅಥವಾ ಯಾರೇ ಅನ್ಯನಾಗಲಿ ಕ್ರಿಸ್ತನಲ್ಲಿ ಐಕ್ಯತೆಗೆ ಪ್ರವೇಶ ಮೂಡುವಾಗ ಅಬ್ರಹಾಮನ ಸಂತತಿಗೆ ಮತ್ತು ವಾಗ್ದಾನದ ಬಾಧ್ಯತೆಗೆ ಸಂಬಂಧ ಪಡುವವರಾಗುತ್ತಾರೆಂಬ ವಾಗ್ದಾನ (ಗಲಾತ್ಯ 3:8,9 ಮತ್ತು 27–29 ವಚನಗಳು) ಇದು ಕೇಡು, ನೋವು ಮತ್ತು ಬಾಧೆಗಳು ಇನ್ನೆಂದಿಗೂ ತಲೆದೋರದ ಪಾಪರಹಿತವಾದ ಪರಿಸರದಲ್ಲಿ ನಿತ್ಯಕ್ಕೂ ಜೀವಿಸುವ (ನಿತ್ಯಜೀವದ) ವಾಗ್ದಾನವಾಗಿದೆ. ಇದಕ್ಕಿಂತಲೂ ಉತ್ತಮವಾದ ವಾಗ್ದಾನವನ್ನು ಆಲೋಚಿಸಬಲ್ಲಿರಾ? ಸಾವು ನೋವುಗಳಿಲ್ಲದ, ಪಾಪವಿಲ್ಲದ ಲೋಕದಲ್ಲಿ ನಿತ್ಯಕ್ಕೂ ಜೀವಿಸುವ ವಾಗ್ದಾನದಲ್ಲಿ ನಮ್ಮನ್ನು ಆಕರ್ಷಿಸುವಂಥದ್ದೂ ಯಾವುದೆಂದೂ ಹೇಳುವಿರಿ? ಮರಳಿ ಅದನ್ನು ಹೊಂದಿಕೊಳ್ಳುವ ತುಡಿತವಿರಬಹುದೆ? ನಮ್ಮ

ಮೂಲ ಸ್ವಭಾವದಲ್ಲಿದ್ದಂಥ ಯಾವುದೋ ಒಂದರ ಪ್ರಯುಕ್ತ ಹಾಗೆ ತುಡಿಯುತ್ತಾ ಇದ್ದೇವೆಯೇ?

**ಮಂಗಳವಾರ** **ಏಪ್ರಿಲ್ 27**

## ಮೆಸ್ಸೀಯನ ವಾಗ್ದಾನ : ಭಾಗ–2

ನಿಜವಾದ ಸಂತೋಷವನ್ನು ಅನುಭವಿಸಲು ನಾವು ತುಂಬಾ ದೂರದ ದೇಶಕ್ಕೆ ಪ್ರಯಾಣ ಮಾಡಬೇಕು ಮತ್ತು ನಮ್ಮಿಂದಲೂ ನಾವು ಹೊರಗಡೆ ಒಯ್ಯಬೇಕು" ಥಾಮಸ್‌ಜಾನ್.

ಮೇಲಿನ ಉಕ್ತಿಯನ್ನು ನೋಡಿರಿ. ಇದು ಕ್ರಿ.ಶ.1600ರಲ್ಲಿ ಬರೆಯಲ್ಪಟ್ಟಿತು, ಈ ಹೇಳಿಕೆಯನ್ನು ನೀವು ಒಪ್ಪುವಿರೋ ಅಥವಾ ಒಪ್ಪದಿರುವಿರೋ? ಇದನ್ನು ಪ್ರಕಟನೆ 3:12 ಮತ್ತು 1 ಥೆಸಲೋನಿಕ 4:16–18ರ ಸಂದರ್ಭದಲ್ಲಿಟ್ಟು ಓದಿರಿ.

ಅಗಸ್ಟೈನನು ಮಾನವನ ಪರಿಸ್ಥಿತಿಯ ಬಗ್ಗೆ ಬರೆದಿದ್ದಾನೆ: ನಮ್ಮ ಜೀವನವು–ದೊಡ್ಡ ದೊಡ್ಡ ಅನಿಷ್ಟಗಳೇ ತುಂಬಿರುವುದನ್ನು ಜೀವನವೆಂದು ಸಮರ್ಪಕವಾಗಿ ಕರೆಯಬಹುದು. ಇದಕ್ಕೆ ಪುರಾವೆಯಂಬಂತೆ ನಶ್ವರವಾದ ಮಾನವ ಜನಾಂಗವು ಆರಂಭದಂತಲೂ ಖಂಡನೆಗೆ ಒಳಗಾಗಿದೆ. ಎಲ್ಲದಕ್ಕಿಂತಲೂ ಮೊದಲಿಗೆ ಭಯಂಕರವಾದ ಅಜ್ಞಾನದ ಗುಂಡಿಯೊಳಗೆ ಬಿದ್ದಿದೆ ಅದರಿಂದ ಎಲ್ಲಾ ಪ್ರಮಾದಗಳು (ತಪ್ಪುಗಳು) ಹರಿದು ಆದಾಮನ ಮಕ್ಕಳನ್ನು ಅಂಧಕಾರದ ಮಡುವಿನೊಳಗೆ ಆದಾಮನ ಮಕ್ಕಳನ್ನು ಸುತ್ತುವರೆದಿದೆ, ಹಾಗಾಗಿ ಯಾರೂ ಕಣ್ಣೀರು ಹಾಕದೆ ಬವಣೆಪಡದೆ ಇಲ್ಲಿಂದ ಪಾರಾಗಲು ಸಾಧ್ಯವೇ ಇಲ್ಲ. ವ್ಯರ್ಥವಾಗಿ, ವಿಷಕಾರಿಯಾದುವುಗಳಾಗಿ ಸಾಬೀತಾಗಿರುವ ವಿಷಯಗಳ ಮೇಲೆ ನಮಗಿರುವ ಪ್ರೀತಿಯನ್ನೇ ತೆಗೆದುಕೊಳ್ಳಿರಿ. ಇವುಗಳು ನಮಗೆ ತುಂಬಾ ತಲೆನೋವುಗಳನ್ನು ತೊಂದರೆಗಳನ್ನು ದುಃಖಗಳನ್ನು ಮತ್ತು ಭಯವನ್ನು ತರುತ್ತವೆ. ವಿರಸ ಜಗಳ, ಯುದ್ಧಗಳಲ್ಲಿ ಹುಚ್ಚರಂತೆ ಸಂತೋಷ ಪಡುತ್ತೇವೆ, ಅಂತಹ ಮೋಸ ಕಳ್ಳತನ ಮತ್ತು ಡಕಾಯ್ತಿ; ಅಂತಹ ದ್ರೋಹ, ಗರ್ವ, ಮತ್ಸರ ಮತ್ತು ಅತಿಯಾಸೆ, ನರಹತ್ಯೆ, ಕೊಲೆ, ಕ್ರೂರತೆ, ಹಿಂಸೆ, ಸ್ವೇಚ್ಛಾಚಾರ ಮತ್ತು ಲಂಪಟನೆ; ಅಶುದ್ಧವಾದ ನಾಚಿಗೇಡಿನ ಆಶೆಗಳು–ಜಾರತನ ಮತ್ತು ವ್ಯಭಿಚಾರ,

ನಿಶಿದ್ಧಕಾಮಕೇಳಿ ಮತ್ತು ಅಸ್ವಾಭಾವಿಕ ಪಾಪಗಳು, ಅತ್ಯಾಚಾರ ಮತ್ತು ಹೇಳುವುದಕ್ಕೆ ಜುಗುಪ್ಸೆ ತರುವ ಅಸಂಖ್ಯಾತ ಅಸಹ್ಯತನ; ಧಾರ್ಮಿಕ ಪಾಪಗಳು– ಅಪವಿತ್ರ ಪಡಿಸುವುದು ಮತ್ತು ಪಾಷಾಂಡತೆ, ದೇವದೂಷಣೆ ಮತ್ತು ಸುಳ್ಳು ಪ್ರಮಾಣ; ನಮ್ಮ ನೆರೆಯವರ ಮೇಲೆ ಎಸಗುವ ಅಕ್ರಮಗಳು– ಸುಳ್ಳು ಆರೋಪಗಳು ಮತ್ತು ಮೋಸಪಡಿಸುವಿಕೆ, ಸುಳ್ಳು ಮತ್ತು ಸುಳ್ಳು ಸಾಕ್ಷಿ ವ್ಯಕ್ತಿಗಳನ್ನು ನಾಶಪಡಿಸುವುದು; ನ್ಯಾಯಾಲಯಗಳೇ ಅನ್ಯಾಯ ಮಾಡುವುದು ಮತ್ತು ಲೋಕದಲ್ಲಿ ಇತರೆ ಸಂಕಟಗಳು, ಅನರ್ಥಗಳು ತುಂಬಿದ್ದಾಗ್ಯೂ ನಮ್ಮ ಗಮನಕ್ಕೆ ಬರದೆ ಹೋಗುತ್ತವೆ"– ಆಗಸ್ಟೀನ್‌ರವರ ಸಿಟಿ ಆಫ್ ಗಾಡ್ ಪುಸ್ತಕದಲ್ಲಿ 519ನೇ ಪುಟ.

ಆಗಸ್ಟೀನ್‌ರವರ ಉಕ್ತಿಯನ್ನು ಸುಮಾರು 15 ಶತಮಾನಗಳ ಹಿಂದೆ ಬರೆದಿದ್ದಾಗ್ಯೂ ಇದನ್ನು ಇಂದಿನ ಆಧುನಿಕ ನಗರಗಳಿಗೆ ಹೋಲಿಸಬಹುದು. ಮಾನವ ಕುಲವು ಕೊಂಚ ಮಾತ್ರ ಬದಲಾಗಿದೆ. ಆದುದರಿಂದ ಜನರು ಪಾರಾಗ ಬಯಸುತ್ತಾರೆ.

ಸುದೈವದಿಂದ ನಮ್ಮ ಸನ್ನಿವೇಶವು ಈವಾಗ ಎಷ್ಟೇ ತ್ರಾಸವಾಗಿದ್ದರೂ ಭವಿಷ್ಯವು ಪ್ರಕಾಶಮಾನವಾಗಿದೆ– ಆದರೆ ಮನುಷ್ಯನಿಗೋಸ್ಕರ ಯೇಸುಕ್ರಿಸ್ತ ತನ್ನ ಜೀವನ, ಮರಣ ಪುನರುತ್ಥಾನ ಹಾಗೂ ಮಹಾಯಾಜಕನ ಸೇವೆಯ ಮೂಲಕ ಏನು ಮಾಡಿದನೋ ಅದರಿಂದ ಮಾತ್ರವೇ – ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲಗಳು ಆಶೀರ್ವಾದ ಹೊಂದುತ್ತವೆ ಎಂದು ಅಬ್ರಹಾಮನಿಗೆ ಮಾಡಿದ ಒಡಂಬಡಿಕೆ ವಾಗ್ದಾನವು ಅಂತಿಮವಾಗಿ ಈ ರೀತಿಯಲ್ಲಿ (ಕ್ರಿಸ್ತನ ಮೂಲಕ) ನೆರವೇರಿತು.

ಆಗಸ್ಟಿನ್ನನ ಉಕ್ತಿಯನ್ನು ನೋಡಿರಿ. ನಿಮ್ಮ ಸ್ವಂತ ವಾಕ್ಯಗಳಲ್ಲಿ ಲೋಕದಲ್ಲಿರುವ ಇಂದಿನ ಪರಿಸ್ಥಿತಿಯ ಬಗ್ಗೆ ಏನಾದರೊಂದನ್ನು ಬರೆಯಿರಿ. ಅದೇ ವೇಳೆಯಲ್ಲಿ ದೇವರು ಕ್ರಿಸ್ತನ ಮುಖಾಂತರ ಏನೆಲ್ಲವನ್ನು ವಾಗ್ದಾನ ಮಾಡಿರುವನೋ ಅದಕ್ಕೆ ಸಂಬಂಧಪಟ್ಟ ಸತ್ಯವೇದದ ವಚನಗಳನ್ನು ನೋಡಿರಿ (ಉದಾಹರಣೆಗೆ ಯೆಶಾಯ 25:8, 1 ಕೊರಿಂಥ 2:9 ಮತ್ತು ಪ್ರಕಟನೆ 22:2–5). ಈ ವಾಗ್ದಾನಗಳ ಬಗ್ಗೆ

ಆಲೋಚಿಸಿರಿ. ಅವುಗಳನ್ನು ನಿಮ್ಮದಾಗಿ ಮಾಡಿಕೊಳ್ಳಿರಿ. ಆವಾಗ ಮಾತ್ರ ನೀವು ಒಡಂಬಡಿಕೆಯು ಏನೆಲ್ಲಾ ಆಗಿದೆ ಎಂಬುದನ್ನು ಗ್ರಹಿಸಿಕೊಳ್ಳುವಿರಿ.

**ಬುಧವಾರ** **ಏಪ್ರಿಲ್ 28**

## ಒಂದು ಬಲಿಷ್ಠವಾದ ಮಹಾಜನಾಂಗವು .....

ದೇವರು ಅಬ್ರಹಾಮನ ಮೂಲಕ ಭೂಮಿಯ ಎಲ್ಲಾ ಕುಲಗಳು ಆಶೀರ್ವಾದ ಹೊಂದುತ್ತವೆ ಎಂಬುದಾಗಿ ವಾಗ್ದಾನ ಮಾಡುವುದು ಮಾತ್ರವಲ್ಲ. ಅವನನ್ನು ಬಲಿಷ್ಠವಾದ ಮಹಾಜನಾಂಗವನ್ನಾಗಿ ಮೂಡುತ್ತೇನೆಂತಲೂ ಸಹಾ ಹೇಳಿದನು (ಆದಿಕಾಂಡ 18:8; ಆದಿಕಾಂಡ 12:2 ಮತ್ತು ಆದಿಕಾಂಡ 46:3) ಮಕ್ಕಳನ್ನು ಹಡೆಯುವ ಪ್ರಾಯಕಳೆದುಹೋದ ಸಾರಳನ್ನು ಹೆಂಡತಿಯಾಗಿ ಹೊಂದಿದ್ದ ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನವು ಶುದ್ಧ ವಾಗ್ದಾನವೇ ಆಗಿತ್ತು. ಸಂತತಿ ಮತ್ತು ಗಂಡುಮಕ್ಕಳೇ ಇಲ್ಲದಿರುವಾಗ ದೇವರು ಅಬ್ರಹಾಮನಿಗೆ ಎರಡನ್ನೂ ಕೊಡುವ ವಾಗ್ದಾನ ಮಾಡಿದ್ದಾನೆ. ಆದಾಗ್ಯೂ, ಅಬ್ರಹಾಮನ ಜೀವಂತವಾಗಿರುವಾಗ ವಾಗ್ದಾನವು ಪೂರ್ಣವಾಗಿ ನೆರವೇರಿರುವುದನ್ನು ನೋಡಲಿಲ್ಲ; ನಿಜವಾಗಿ ಇಸಾಕನಾಗಲೀ ಇವನ ಮಗ ಯಾಕೋಬನಾಗಲೀ ಈ ವಾಗ್ದಾನವು ನೆರವೇರುವುದನ್ನು ನೋಡಲಿಲ್ಲ. ದೇವರು ಯಾಕೋಬನಿಗೂ ಇದೇ ವಾಗ್ದಾನವನ್ನು ಪುನರಾವರ್ತಿಸಿದನು. ಜೊತೆಗೆ ಇದು ಐಗುಪ್ತದೇಶದಲ್ಲಿ ನೆರವೇರುತ್ತದೆಯೆಂಬ ಹೆಚ್ಚಿನ ಮಾಹಿತಿಯನ್ನು ಅವರಿಗೆ ಕೊಟ್ಟನು (ಆದಿಕಾಂಡ 46:3). ಯಾಕೋಬನು ಇದನ್ನು ನೋಡಲಿಲ್ಲದಾದರೂ ಅಂತಿಮವಾಗಿ ದೇವರು ಮಾಡಿದ ವಾಗ್ದಾನವು ನೆರವೇರಿತು.

ದೇವರು ಅಬ್ರಹಾಮನ ಸಂತಾನದ ಮೂಲಕ ಒಂದು ವಿಶೇಷವಾದ ಜನಾಂಗವನ್ನು ಉಂಟುಮಾಡ ಬಯಸಿದನು, ಏಕೆ? ದೇವರಿಗೆ ಕೇವಲ ಮತ್ತೊಂದು ಜನಾಂಗ ಮೂಲದ ದೇಶವನ್ನು ಕಟ್ಟುವುದು ಬೇಕಾಗಿತ್ತೆ? ಯಾವ ಉದ್ದೇಶಗಳನ್ನು ಈ ಜನಾಂಗವು ನೆರವೇರಿಸಬೇಕಾಗಿತ್ತು? ವಿಮೋಚನಕಾಂಡ 19:5,6 ಮತ್ತು ಯೆಶಾಯ 60:1–3ನ್ನು ಧರ್ಮೋಪದೇಶಕಾಂಡ 4:6–8 ವಚನಗಳನ್ನು ಓದಿರಿ. ಕೆಳಗೆ ಕೊಟ್ಟಿರುವ ಗೆರೆಗಳ ಮೇಲೆ ನಿಮ್ಮ ಉತ್ತರವನ್ನು ಬರೆಯಿರಿ.

ದೇವರು ಇಸ್ರಾಯೇಲ್ ಜನಾಂಗದ ಸಾಕ್ಷಿಯ ಮೂಲಕ ಇಡೀ ಲೋಕದ ಜನಾಂಗಗಳನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಉದ್ದೇಶ ಹೊಂದಿದ್ದನು ಎಂಬುದು ಸ್ಪಷ್ಟವಾಗುತ್ತದೆ. ಅಂತಹ ದೇಶವು, ತನ್ನ ಸೃಷ್ಟಿಕರ್ತನಿಗೆ ವಿಧೇಯರಾಗುವವರು ಆಶೀರ್ವಾದವನ್ನು ಹೊಂದುತ್ತಾರೆಂದು ಲೋಕಕ್ಕೆ ನಿದರ್ಶನರೂಪವಾಗಿ ತೋರಿಸಿಕೊಡುತ್ತದೆ. ಆವಾಗ ಭೂಮಿಯ ಮೇಲಿರುವ ಜನಸಮೂಹಗಳು ಸತ್ಯವಾದ ದೇವರನ್ನು ಆರಾಧಿಸುವುದಕ್ಕೆ ಸೆಳೆಯಲ್ಪಡುವರು (ಯೆಶಾಯ 56:7). ಹಾಗಾಗಿ ಇಡಿ ಮಾನವ ಕುಲದ ಗಮನವು ಇಸ್ರಾಯೇಲ್ ಜನಾಂಗದ ಕಡೆಗೆ, ಅವರ ದೇವರ ಕಡೆಗೆ ಮತ್ತು ಅದರ ಮಧ್ಯೆ ಕಾಣಿಸಿಕೊಳ್ಳುವ ಲೋಕರಕ್ಷಕನಾದ ಯೇಸುಕ್ರಿಸ್ತನ ಕಡೆಗೆ ಸೆಳೆಯಲ್ಪಡುವುದಿತ್ತು.

ದೇವರು ಇಸ್ರಾಯೇಲ್ಯರಿಗೆ ನೇಮಿಸಿದ ಎಲ್ಲಾ ಪ್ರಾಂತ್ಯಗಳನ್ನು ಅವರು ಆಕ್ರಮಿಸಿಕೊಳ್ಳಬೇಕಾಗಿತ್ತು. ಯಾವ ಜನಾಂಗಗಳು ತಮ್ಮ ಸೃಷ್ಟಿಕರ್ತನಾದ ಸತ್ಯವಾದ ದೇವರನ್ನು ಸೇವಿಸಲು ನಿರಾಕರಿಸಿದರೋ ಅವರು ಅವನತಿ ಹೊಂದಬೇಕಾಗಿತ್ತು (ತೆಗೆಯಲ್ಪಡಬೇಕಾಗಿತ್ತು).

ಆದರೆ ದೇವರು ತನ್ನ ಸ್ವಭಾವವನ್ನು ಇಸ್ರಾಯೇಲ್ಯರ ಮೂಲಕ ಪ್ರಕಟಪಡಿಸಿ ಜನರನ್ನು ತನ್ನ ಕಡೆಗೆ ಎಳೆದುಕೊಳ್ಳುವ ಉದ್ದೇಶ ಹೊಂದಿದ್ದನು. ಇಡೀ ಲೋಕಕ್ಕೆ ಸುವಾರ್ತೆಯ ಆಮಂತ್ರಣವನ್ನು ನೀಡಬೇಕಾಗಿತ್ತು. ದೇವದರ್ಶನ ಗುಡಾರದಲ್ಲಿ ನಡೆಯುವ ಸೇವೆಗಳು ನೀಡುವ ಬೋಧನೆಗಳ ಮುಖಾಂತರ ಯೇಸುಕ್ರಿಸ್ತನು ಜನಾಂಗಗಳ ಮುಂದೆ ಮೇಲೆತ್ತಲ್ಪಟ್ಟು ಯಾರ್‍ಯಾರು ಆತನ ಕಡೆಗೆ ನೋಡುವವರು ಜೀವಿಸುವಂತೆ ಆಗಬೇಕಾಗಿತ್ತು". ಎಲೆನ್ ಜಿ ವೈಟಮ್ಮನವರ ಕ್ರಿಸ್ತನ ಧ್ಯೇಯ ಬೋಧನೆಗಳು (Christ Object Lessons) ಪುಸ್ತಕದಲ್ಲಿ 290ನೇ ಪುಟ. ದೇವರು ಇಸ್ರಾಯೆಲ್ಯರ ಮೂಲಕ ಮತ್ತು ನಮ್ಮ ಸಭೆಯ ಮೂಲಕ ಮಾಡುವ ಕೆಲಸಗಳ ನಡುವೆ ಏನಾದರೂ ಸಮಾನತೆಗಳನ್ನು (ಹೋಲಿಕೆಗಳನ್ನು) ಕಾಣಬಲ್ಲಿರಾ? ಕಾಣಬಲ್ಲಿರಾದರೆ ಅವು ಯಾವುವು? 1 ಪೇತ್ರ 2:9ನ್ನು ಓದಿರಿ.

**ಗುರುವಾರ** **ಏಪ್ರಿಲ್ 29**

## ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು

ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದನಿಧಿಯಾಗುವಿ" (ಆದಿಕಾಂಡ 12:2)

ಅವನ ಹೆಸರನ್ನು ಪ್ರಖ್ಯಾತಿಗೆ ತರುತ್ತೇನೆಂದು ವಾಗ್ದಾನ ಮಾಡುತ್ತೇನೆ. ಒಬ್ಬ ವ್ಯಕ್ತಿಯು ಎಷ್ಟೇ ವಿಧೇಯನಾಗಿದ್ದರೂ ನಂಬಿಗಸ್ತನಾಗಿದ್ದರೂ ಪಾಪಿಯಾದ ಆತನಿಗೆ ದೇವರು ಯಾಕೆ ಹಾಗೆ ಮಾಡಬೇಕು? ಯಾರು ತಮ್ಮ ಹೆಸರು ಪ್ರಖ್ಯಾತಿ ಹೊಂದಲು ಯೋಗ್ಯರಾಗಿದ್ದಾರೆ? (ರೋಮ 4:1–5 ಮತ್ತು ಯಾಕೋಬ 2:21–24ವನ್ನು ನೋಡಿರಿ).

ದೇವರು ತನ್ನ ಸಂತ ಲಾಭಕ್ಕಾಗಿ ಅಬ್ರಹಾಮನಿಗೆ ಪ್ರಖ್ಯಾತಿಯನ್ನು ಅನುಗ್ರಹಿಸಿದನೆ ಅಥವಾ ಇದು ಇನ್ನೂ ಹೆಚ್ಚಿನದನ್ನು ಪ್ರತಿಬಿಂಬಿಸುತ್ತದೆಯೇ? ವಿವರಿಸಿರಿ.

ಆದಿಕಾಂಡ 11:4ನ್ನು ಆದಿಕಾಂಡ 12:2ಕ್ಕೆ ಹೋಲಿಸಿರಿ ಈ ಎರಡು ವಚನಗಳಲ್ಲಿ ಪ್ರಸ್ತುತಪಡಿಸಿರುವ ಆಲೋಚನೆಗಳ ಮಧ್ಯೆ ಯಾವ ದೊಡ್ಡ ವ್ಯತ್ಯಾಸವಿದೆ? ಯಾವ ರೀತಿಯಲ್ಲಿ ಒಂದು ಆಲೋಚನೆ ಕ್ರಿಯೆಗಳಿಂದ ರಕ್ಷಣೆಯೆಂತಲೂ ಮತ್ತೊಂದು ಆಲೋಚನೆ ನಂಬಿಕೆಯಿಂದ ರಕ್ಷಣೆಯೆಂತಲೂ ಪ್ರತಿಬಿಂಬಿಸುತ್ತವೆ. ಏನೇ ಆಗಲಿ ಹೆಚ್ಚಾಗಿ ರಕ್ಷಣೆಯ ಯೋಜನೆಯು ಯೇಸುಕ್ರಿಸ್ತನು ನಮ್ಮ ಸಲುವಾಗಿ ಮಾಡಿದ ಕೆಲಸದ ಮೇಲೆ ಆಧಾರಗೊಂಡಿದೆ. ನಾವು ದೇವರಕೃಪೆಯನ್ನು ಹೊಂದಿದವರಾಗಿ ರಕ್ಷಣೆಗೆ ಒಳಗಾಗಿದ್ದರೂ ನಾವು ನಿರ್ವಹಿಸಬೇಕಾದ ಒಂದು ಪಾತ್ರವಿದೆ. ಇಲ್ಲಿ ನಮ್ಮ ಆಯ್ಕೆಯ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯತೆ ಬರುತ್ತದೆ.

ಯೇಸುಕ್ರಿಸ್ತನ ಮತ್ತು ಸೈತಾನನ ನಡುವಿನ ಹೋರಾಟವು ಯುಗಯುಗಾಂತರ–ಗಳಿಂದಲೂ ನಡೆದುಕೊಂಡು ಬರುತ್ತಿದೆ. ಅದು ಈಗಲೂ ನಮ್ಮ ಮೂಲಕ ಮುಂದುವರೆಯುತ್ತಿದೆ. ಮಾನವರು ಮತ್ತು ದೇವದೂತರು ಈ ಹೋರಾಟದಲ್ಲಿ ಏನಾಗುವುದೋ ಎಂದು ಕಾಯುತ್ತಿದ್ದಾರೆ (1 ಕೊರಿಂಥ 4:9). ಹಾಗಾಗಿ

ನಾವು ಯಾರು ಏನನ್ನೂ ಅನ್ನುತ್ತೇವೆಯೋ ಏನನ್ನು ಮಾಡುತ್ತೇವೆಯೋ ಅವು ಪ್ರತಿಯೊಂದು ವಿಶ್ವಮಟ್ಟದಲ್ಲಿ ಪರಿಣಾಮಬೀರುತ್ತವೆ. ನಮಗೆ ಹೆಚ್ಚಾದ ಉಪಕಾರವನ್ನು ಮಾಡಿರುವ ದೇವರಿಗೆ ನಾವು ನಮ್ಮ ಮಾತುಗಳಿಂದಲೂ ನಮ್ಮ ಕ್ರಿಯೆಗಳಿಂದಲೂ ಮತ್ತು ನಮ್ಮ ಧೋರಣೆಯಿಂದಲೂ ನಮ್ಮ ದೇವರಿಗೆ ಮಹಿಮೆ ತರಬಹುದು ಅಥವಾ ಅವನಿಗೆ ಅವಮಾನವನ್ನೂ ತರಬಹುದು. ಹಾಗಾಗಿ, ದೇವರು ಅಬ್ರಹಾಮನಿಗೆ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನೆಂದು ಹೇಳುವಾಗ ದೇವರು ಲೋಕವು ಒಬ್ಬ ಪ್ರಖ್ಯಾತಿ ಹೊಂದಿದ ಮನುಷ್ಯನ ಬಗ್ಗೆ ಮಾತಾಡುವಂತೆ ಆಡುತ್ತಿಲ್ಲ. ದೇವರ ದೃಷ್ಟಿಯಲ್ಲಿ ಒಂದು ಹೆಸರು ಪ್ರಖ್ಯಾತಿ ಹೊಂದಲು ಈ ಗುಣಗಳ ಅವಶ್ಯವಿಲ್ಲವೆಂದು ಬಗೆಯುತ್ತದೆ. ಇಂದು ಲೋಕದಲ್ಲಿ ಪ್ರಖ್ಯಾತಿ ಹೊಂದಿರುವ ಕೆಲವು ಸ್ತ್ರೀಪುರುಷರ ಹೆಸರನ್ನು ನೋಡಬಹುದು. ಅವರು ನಟರಾಗಿರಬಹುದು. ರಾಜಕೀಯ ವ್ಯಕ್ತಿಯಾಗಿರಬಹುದು, ಕಲಾವಿದರಾಗಿರಬಹುದು, ಶ್ರೀಮಂತರಾಗಿರಬಹುದು ಇಲ್ಲವೇ ಯಾರೇ ಆಗಿರಬಹುದು. ಇವರನ್ನು ಪ್ರಖ್ಯಾತಿಗೆ ತಂದಿರುವಂಥದ್ದು ಯಾವುದಾಗಿರಬಹುದು? ಅಬ್ರಹಾಮನ ಪ್ರಖ್ಯಾತಿಗೆ ವ್ಯತಿರಿಕ್ತವಾಗಿ ದೊಡ್ಡತನದ ಬಗ್ಗೆ ಹೇಗೆ ಲೋಕದ ಪರಿಕಲ್ಪನೆಯು ಕೆಟ್ಟುಹೋಗಿದೆ ಎಂಬುದರ ಬಗ್ಗೆ ಇದು ಏನು ಹೇಳುತ್ತದೆ. ಲೌಕಿಕವಾದ ಧೋರಣೆಯು ದೊಡ್ಡತನದ ಬಗ್ಗೆ ನಾವು ಹೊಂದಿರುವ ಅಭಿಪ್ರಾಯದ ಮೇಲೆ ಹೇಗೆ ಪರಿಣಾಮವನ್ನು ಬೀರುತ್ತದೆ?

**ಶುಕ್ರವಾರ** **ಏಪ್ರಿಲ್ 30**

**ಹೆಚ್ಚಿನ ಚಿಂತನೆಗೆ :** ಎಲೆನ್ ಜಿ ವೈಟಮ್ಮನವರ ನಮ್ಮ ಪಿತೃಗಳು ಮತ್ತು ಪ್ರವಾದಿಗಳು ಎಂಬ ಪುಸ್ತಕದಲ್ಲಿ "ಕಾನಾನಿನಲ್ಲಿ ಅಬ್ರಹಾಮನು ಪುಟ 132–144, ಮತ್ತು ನಂಬಿಕೆಗೆ ಆದ ಪರೀಕ್ಷೆ ಪುಟ 145–155ನ್ನು ಓದಿರಿ.

ಅಬ್ರಹಾಮನಿಗೆ ಬಂದ ಪರೀಕ್ಷೆ ಹಗುರವಾದದ್ದಾಗಿರಲಿಲ್ಲ, ಅವನು ಮಾಡಬೇಕಾಗಿದ್ದ ತ್ಯಾಗವು ಸಣ್ಣಪ್ರಮಾಣದ್ದಾಗಿರಲಿಲ್ಲ. ತನಗೆ ವಾಗ್ದಾನ ಮಾಡಿದ ದೇಶದ ಬಗ್ಗೆ ಕೇಳುವುದಕ್ಕೆ ಆತನಲ್ಲಿ ಯಾವ ಪ್ರಶ್ನೆಯೂ ಇರಲಿಲ್ಲ... ದೇವರು ಮಾತಾಡಿದನು, ಆತನ ಸೇವಕನು ಅದಕ್ಕೆ ವಿಧೇಯನಾಗಬೇಕಷ್ಟೆ. ಭೂಮಿಯ ಮೇಲೆ ಏನಾದರೂ ಸಂತೋಷಪಡುವ ಸ್ಥಳವೇನಾದರೂ ಇದ್ದರೆ ಅದು ದೇವರು

ಅವನನ್ನು ಎಲ್ಲಿ ಇರಿಸುತ್ತಾನೋ ಅದೇ ಸಂತೋಷವಿರುವ ಸ್ಥಳ– ಎಲೆನ್ ಜಿ ವೈಟಮ್ಮನವರ ನಮ್ಮ ಪಿತೃಗಳು ಮತ್ತು ಪ್ರವಾದಿಗಳು ಪುಸ್ತಕದಲ್ಲಿ 126ನೇ ಪುಟ.

ಅಬ್ರಹಾಮನು ಕಾನಾನ್ ದೇಶವನ್ನು ಪ್ರವೇಶಿಸಿದಾಗ ದೇವರು ಅವನಿಗೆ ಕಾಣಿಸಿಕೊಂಡು ಆತನ ಸಂತತಿಗೆ ಕೊಡುವ ಈ ದೇಶದಲ್ಲಿ ನೀನು ಪ್ರವಾಸಿಯಾಗಿರಬೇಕೆಂದು ಸ್ಪಷ್ಟಪಡಿಸಿದನು (ಆದಿಕಾಂಡ 12:7). ದೇವರು ಈ ವಾಗ್ದಾನವನ್ನು ಅನೇಕ ಸಲ ಪುನರಾವರ್ತಿಸಿದನು (ನೋಡಿರಿ ಆ.ಕಾಂಡ 13:14,15,17; ಆ.ಕಾಂಡ 15:13,16,18; ಆ.ಕಾಂಡ 17:8; ಆ.ಕಾಂಡ 28:13,15, ಆ.ಕಾಂಡ 35:12). ನಾಲ್ಕು ನೂರು ವರುಷಗಳ ನಂತರ ದೇವರು ತಾನು ಮಾಡಿದ ವಾಗ್ದಾನವನ್ನು ನೆರವೇರಿಸುವವನಾಗಿ (ಆ.ಕಾಂಡ 15:13,16). ಇಸ್ರಾಯೇಲ್ಯರನ್ನು ಐಗುಪ್ತದೇಶದಿಂದ ಹಾಲುಜೇನು ಹರಿಯುವ ದೇಶಕ್ಕೆ ಕರೆತರುವುದಾಗಿ ಮೋಶೆಗೆ ಪ್ರಕಟಿಸುತ್ತಾನೆ (ವಿ.ಕಾಂಡ 3:8,17; ವಿ.ಕಾಂಡ 6:8). ದೇವರು ಈ ವಾಗ್ದಾನವನ್ನು ಯೆಹೋಶುವನಿಗೆ ಪುನರಾವರ್ತಿಸಿದನು (ಯೆಹೋಶುವ 1:3). ದಾವೀದನ ಕಾಲದಲ್ಲಿ ಇದು ಬಹುತೇಕ ನೆರವೇರಿತು. ಆದರೆ ಸಂಪೂರ್ಣವಾಗಿ ನೆರವೇರಲಿಲ್ಲ (ಆ.ಕಾಂಡ 15:18–21, 2 ಸಮುವೇಲ 8:1–14; 1 ಅರಸು 4:21, 1 ಪೂ.ವೃ. 19:1–19).

ಈವಾಗ ಇಬ್ರಿಯ 11:9,10, 13–16ನ್ನು ಓದಿರಿ. ಈ ವಚನಗಳು ಅಬ್ರಹಾಮ ಮತ್ತು ಇನ್ನಿತರೆ ಪಿತೃಗಳು ಕಾನಾನ್ ದೇಶವನ್ನು ಸಾಂಕೇತಿಕವಾಗಿ ವೀಕ್ಷಿಸಿದರು ಅಥವಾ ಮುಂದಿನ ಛಾಯೆಯಾಗಿ ವಿಮೋಚಿತ ಜನರ ಅಂತಿಮ ನಿವಾಸವಾಗಿ ಕಂಡರು. ಪಾಪವು ನೆಲೆಯಾಗಿರುವ ಸನ್ನಿವೇಶಗಳಲ್ಲಿ ಶಾಶ್ವತವಾದ (ಖಾಯಂ) ನಿವಾಸ ಎಂದಿಗೂ ಸಾಧ್ಯವಿಲ್ಲ. ಜೀವನವು ಈವಾಗ ಕಾಣಿಸಿಕೊಂಡು ಸ್ವಲ್ಪ ಹೊತ್ತಿಗೆ ಕರಗಿ ಹೋಗುವ ಮಂಜಿನಂತೆ ನಶ್ವರವಾದುದಾಗಿದೆ (ಯಾಕೋಬ 4:14). ಅಬ್ರಹಾಮನ ಆತ್ಮೀಕ ಸಂತತಿಯಾದ ನಮಗೂ ಸಹಾ ಇಲ್ಲಿ ಎಂದೆಂದಿಗೂ ಉಳಿಯುವ ಪಟ್ಟಣವಿರುವುದಿಲ್ಲ. ಆದರೆ ಬರುವುದಕ್ಕಿರುವ ಪಟ್ಟಣವನ್ನು ಎದುರು ನೋಡುವವರಾಗಿದ್ದೇವೆ ಎಂಬುದನ್ನು ನಾವು ಮನಗಾಣಬೇಕು" (ಇಬ್ರಿ 13:14). ಕ್ರಿಸ್ತನ ಜೊತೆಗೆ ಭವಿಷ್ಯದಲ್ಲಿ ಜೀವಿಸುವ ನಿಶ್ಚಿತತೆಯು ನಮ್ಮನ್ನು ಬದಲಾಗುವ, ನಾಶ ಹೊಂದುವ ಈ ಪ್ರಸ್ತುತ ಪ್ರಪಂಚದಲ್ಲಿ ದೃಢವಾಗಿ ಇರಿಸುತ್ತದೆ.

# ಆರೋಗ್ಯದ ಲೇಖನಮಾಲೆ

## ಐದನೇ ವಾರ

## * ಅತಿಯಾದ ತೂಕ

**ಅತಿಯಾದ ತೂಕ ಎಂದರೇನು?**

ಸಾಮಾನ್ಯವಾಗಿರಬೇಕಾದ, ಉಚಿತವಾದ ಅಥವಾ ಆರೋಗ್ಯಕರವಾದ ಪ್ರಮಾಣವನ್ನು ಮೀರಿದ ದೇಹದ ತೂಕ, ಒಬ್ಬ ಗಂಡಸಿನ ಶರೀರದಲ್ಲಿ ಕೊಬ್ಬು ಶೇ.18ಕ್ಕಿಂತ ಮತ್ತು ಮಹಿಳೆಯಲ್ಲಿ ಶೇ.26ಕ್ಕಿಂತ ಹೆಚ್ಚಿದ್ದಲ್ಲಿ ಅಂತರವನ್ನು ಅತಿಯಾದ ತೂಕವುಳ್ಳವರೆಂದು ಹೇಳಬಹುದು.

**ಕಂಡುಹಿಡಿಯುವುದು ಹೇಗೆ?**

ಹೊಟ್ಟೆಯ ಅಕ್ಕಪಕ್ಕದಲ್ಲಿರುವ ಕೊಬ್ಬಿನ ಉರುಳೆಯನ್ನು ನಿಮ್ಮ ಹೆಬ್ಬೆರಳು ಹಾಗೂ ತೋರುಬೆರಳಿನಿಂದ ಹಿಡಿದುಕೊಳ್ಳಬೇಕು. ಈ ಎರಡೂ ಬೆರಳಿನ ನಡುವಣ ಖಾಲಿ ಸ್ಥಳವನ್ನು ಮತ್ತೊಂದು ಕೈನ ಒಂದು ಬೆರಳಿನಿಂದ ಮುಚ್ಚಿದರೆ ನಿಮ್ಮ ತೂಕ ಅತಿಯಾಗಿಲ್ಲ. ಆದರೆ ಒಂದು ಬೆರಳಿಗಿಂತ ಹೆಚ್ಚಾಗಿ ಬೇಕಾದಲ್ಲಿ ಅಂತವರು ಅತಿ ತೂಕದ ವ್ಯಕ್ತಿಗಳೆಂದು ಹೇಳಬಹುದು.

**ಕಾರಣವೇನು?**

ನಾವು ತೆಗೆದುಕೊಳ್ಳುವ ಆಹಾರವು ಶರೀರದ ಉಪಯೋಗಕ್ಕಾಗಿ ಶಕ್ತಿಯಾಗಿ ಬದಲಾವಣೆಗೊಳ್ಳುತ್ತದೆ. ಹೆಚ್ಚಾದ ಆಹಾರವು ಹೆಚ್ಚಿನ ಶಕ್ತಿಯನ್ನು ಒದಗಿಸುತ್ತದೆ. ಶರೀರವು ಈ ಹೆಚ್ಚಿನ ಶಕ್ತಿಯನ್ನು ಕೊಬ್ಬಿನಂತೆ ಶೇಖರಿಸಿಕೊಳ್ಳುತ್ತದೆ. ಆರೋಗ್ಯ-ವಂತನಾದ ವ್ಯಕ್ತಿಗೆ ಅಲ್ಪ ಪ್ರಮಾಣದ ಹೆಚ್ಚಿನ ಶಕ್ತಿಬೇಕು. ವಾರಕ್ಕೆ ಒಂದು ಕೆ.ಜಿ. ತೂಕ ಇಳಿಸಿಕೊಳ್ಳುವುದು ಸುರಕ್ಷಿತ.

**ವಾರದಲ್ಲಿ ಒಂದು ಕೆ.ಜಿ. ತೂಕ ಇಳಿಸಲು ಏನು ಮಾಡಬೇಕು?**

1. ಹಸಿ ತರಕಾರಿಯನ್ನು ಸಾಲಡ್‌ನಂತೆ ಉಪಯೋಗಿಸಿ.
2. ಸಿಹಿ ಮತ್ತು ಕೊಬ್ಬಿನ ಪದಾರ್ಥಗಳನ್ನು ಕಡಿಮೆ ಮಾದಿ.
3. ದಿನಕ್ಕೆ ಒಂದು ಗಂಟೆ ವ್ಯಾಯಾಮ ಮಾಡಿ. ಹೆಚ್ಚು ನೀರು ಕುಡಿಯಿರಿ.

## * ಏರು ರಕ್ತದೊತ್ತಡ

**ಏರು ರಕ್ತದೊತ್ತಡ (ಬಿ.ಪಿ) ಎಂದರೇನು?**

ರಕ್ತವನ್ನು ತಳ್ಳುವ ಒತ್ತಡವು 140 ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ಮತ್ತು ತಳ್ಳದೆ

ವಿಶ್ರಾಂತಿ ಪಡೆಯುವ ಸಮಯದಲ್ಲಿ 90 ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ, ಏರುರಕ್ತದೊತ್ತಡವೆನ್ನುತ್ತಾರೆ. ರಕ್ತವು ರಕ್ತನಾಳಗಳ ಒಳಗೋಡೆಗಳ ಮೇಲೆ ಹಾಕುವ ಅತಿಯಾದ ಒತ್ತಡವೇ ಬಿ.ಪಿ. ಅಂದರೆ ರಕ್ತದೊತ್ತಡ.

**ಗುರುತಿಸುವುದು ಹೇಗೆ?**

ಆಗಾಗ ವೈದ್ಯರಿಂದ ಪರೀಕ್ಷಿಸಬೇಕು. ಹೃದಯವು ರಕ್ತತಳ್ಳುವಾಗ 120 ಹಾಗೂ ವಿಶ್ರಾಂತಿಯಲ್ಲಿರುವಾಗ 80 ಇದ್ದಲ್ಲಿ (120/80) ಅದು ಆರೋಗ್ಯಕರವಾದ ಸರಾಸರಿ ರಕ್ತದೊತ್ತಡ.

**ಕಾರಣವೇನು?**

ಜೀವದಾಯಕವಾದ ರಕ್ತವು ಅಪಧಮನಿ ಮತ್ತು ಅಬಿಧಮನಿ ರಕ್ತನಾಳಗಳ ಮೂಲಕ ಹೃದಯದಿಂದ ಒತ್ತಲ್ಪಡುತ್ತದೆ. ಆಗ ಇದು ಶರೀರಕ್ಕೆ ಆರೋಗ್ಯಕರವಾಗಿ ಜೀವಿಸಲು ಬೇಕಾದ ಪ್ರಾಣವಾಯು (ಆಕ್ಸಿಜೆನ್) ಮತ್ತು ಪೋಷಕಾಂಶಗಳನ್ನು ಒದಗಿಸುತ್ತದೆ. ಈ ರಕ್ತವು ಒತ್ತಡಕ್ಕೆ ಒಳಗಾಗಿ ರಕ್ತನಾಳಗಳ ಒಳಭಾಗದಲ್ಲಿ ತುಂಬಿಕೊಳ್ಳುತ್ತದೆ. ಹೃದಯವು ನಿಮಿಷಕ್ಕೆ ಸಾಮಾನ್ಯವಾಗಿ 70 ಸಾರಿ ರಕ್ತವನ್ನು ಪಂಪ್ ಮಾಡುತ್ತದೆ. ಸಾಮಾನ್ಯ ರಕ್ತದೊತ್ತಡವು ಏರುರಕ್ತದೊತ್ತಡವಾಗಲು ಕೆಳಗೆ ನೀಡಿರುವ ಅಂಶಗಳು ಕಾರಣವಾಗಿದೆ.

* ರಕ್ತನಾಳಗಳ ಒಳಗಿನ ಸ್ಥಳವು ಅತ್ಯಧಿಕ ಕೊಬ್ಬಿನಾಂಶವುಳ್ಳ ಘನಪಿತ್ತದಿಂದ (ಕೊಲೆಸ್ಟ್ರಾಲ್) ಹಾಗೂ ರಕ್ತ ಹೆಪ್ಪುಗಟ್ಟುವುದರಿಂದ ಕ್ರಮೇಣ ಕಿರಿದಾಗುವುದು.
* ರಕ್ತಕ್ಕೆ ಕೆಲವಾರು ರಸಾಯನಿಕಗಳು ಸೇರಿದಾಗ, ರಕ್ತನಾಳಗಳುಸಂಕುಚಿತಗೊಳ್ಳುತ್ತವೆ.

**ಏನು ಮಾಡಬೇಕು?**

* ಪ್ರತಿದಿನ ಒಂದು ಗಂಟೆಯ ಕಾಲ ವ್ಯಾಯಾಮ ಮಾಡಿ ರಕ್ತನಾಳವನ್ನು ಶುದ್ಧೀಕರಿಸಿ.
* ಆಹಾರದಲ್ಲಿ ಹಿತಮಿತವಿರಬೇಕು ನಿಮ್ಮ ಆಹಾರದಲ್ಲಿ ಕೆಳಗಿನ ಅಂಶಗಳನ್ನು ನೆನಪಿನಲ್ಲಿಡಿ.
* ಶೇ.20 ರಷ್ಟು ನಟ್ಸ್, (ಕರಟಕಾಯಿ, ಚಿಪ್ಪಿನೊಳಗೆ ತಿರುಳಿರುವ) ತೆಂಗಿನಕಾಯಿ, ಒಲೀವ ಎಣ್ಣೆ ಇರುವ ಸಹಜ ಕೊಬ್ಬಿನಾಂಶ ಆಹಾರ ಸೇವಿಸಬೇಕು. ಶೇ.15 ರಷ್ಟು ಸಸಾರಜನಕವುಳ್ಳ ಬೇಳೆ ಕಾಳುಗಳು, ಬೀನ್ಸ್, ಕಡಲೇಕಾಳು ಮತ್ತು ನಟ್ಸ್ ತಿನ್ನಬೇಕು.
* ಶೇ.65 ಭಾಗ ಕಾರ್ಬೋಹೈಡ್ರೇಟ್ಸ್ ಇರುವ ಗೋಧಿ, ಮೆಕ್ಕೆಜೋಳ, ಅಕ್ಕಿ, ಆಲೂಗಡ್ಡೆ ಮುಂತಾದವುಗಳನ್ನು ಉಪಯೋಗಿಸಬೇಕು.